ಈ) ವೇತನ ಮಂಡಳಿಯ ಶಿಫಾರಸ್ಸಿನ ಅನ್ವಯ ಸರ್ಕಾರಕ್ಕೆ ಮಾಹಿತಿ ವರದಿ ಬಂದಿರುತ್ತದೆ. ಶಿಫಾರಸ್ಸನ್ನು ಅನುಷ್ಠಾನಗೊಳಿಸಿದ ಬಗ್ಗೆ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ತ್ರೈಮಾಸಿಕ ವರದಿಯ ರೂಪದಲ್ಲಿ ನೀಡಲಾಗುತ್ತಿದೆ.

805(804) ಶ್ರೀ ರಘುಪತಿ ಭಟ್ ಕೆ. (ಉಡುಪಿ): ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕು ಮಲ್ಪೆ–ಕೊಡವೂರು ಗ್ರಾಮದ ಕೊಳ್ಳ–ಪಡುಕೆರೆ ಪ್ರದೇಶದಲ್ಲಿ 600ರಷ್ಟು ನಿವೇಶನ ರಹಿತ ಬಡ ಮೀನುಗಾರರು ಹಕ್ಕುಪತ್ರವಿಲ್ಲದೆ 40–50 ವರ್ಷಗಳಿಂದ ವಾಸ್ತವ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ನಿವೇಶನಗಳಿಗೆ ಹೊಸ ಸರ್ವೆ ನಂಬರ್ ನೀಡುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರ್ಕಾರ ಸೂಕ್ತ ಆದೇಶ ಹೊರಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಉಡುಪಿ ತಾಲ್ಲೂಕು ಕಡೂರು ಗ್ರಾಮದ ಮಲ್ಪೆ–ಕೊಳ್ಳ ಹಾಗೂ ಪಡುಕೆರೆ ಪ್ರದೇಶದಲ್ಲಿ ಸರ್ಕಾರದ ಆದೇಶ ಸಂ: ಆರ್‌ಡಿ 12 ಎಲ್‌ಜಿಎ 91 ಬೆಂಗಳೂರು ದಿ:29ನೇ ಸೆಪ್ಟಂಬರ್ 1994ರಂತೆ 345 ಜನರ ಅಕ್ರಮಣವನ್ನು ಸಕ್ರಮೀಕರಿಸಲು ಸರ್ಕಾರ ಅನುಮತಿ ನೀಡಿರುತ್ತದೆ. ಈ ಪ್ರದೇಶವು ಸಮುದ್ರ ಎಂದು ಕಂದಾಯ ದಾಖಲೆಗಳಲ್ಲಿದ್ದು, ಅಕ್ರಮಣದಾರರಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 81 ಮತ್ತು 92ನ್ನು ಅನುಸರಿಸಿ ತಾತ್ಕಾಲಿಕ ಹಕ್ಕುಪತ್ರ ನೀಡಲಾಗಿದೆ. ಅದರಲ್ಲಿ ಸರ್ವೆ ನಂಬರ್ ನಮೂದಿಸಿಲ್ಲ. ಬದಲಾಗಿ ಸಮುದ್ರ ಎಂದು ದಾಖಲಿಸಿ ನೀಡಿದೆ. ತದನಂತರ ಈಗ ಸರ್ವೆ ನಂಬರ್ ನೀಡುವ ಬಗ್ಗೆ ಕ್ರಮ ಜರುಗಿಸಲಾಗಿದ್ದು, ಸರ್ಕಾರದ ಹಂತದಲ್ಲಿ ಪ್ರಸ್ತಾವನೆ ವ್ಯವಹರಣೆಯಲ್ಲಿದೆ. ಅತಿಕ್ರಮಣದಾರರು ಸರ್ಕಾರದ ಆದೇಶದಲ್ಲಿ ಹೇಳಿದ ಭೂ ಮೌಲ್ಯ ಹಾಗೂ ಇನ್ನಿತರ ಶುಲ್ಕಗಳನ್ನು ಪಾವತಿಸಬೇಕಾಗಿರುತ್ತದೆ.

ಆ) ಹರಿಯುವ ಯಾವುದೇ ನದಿ ಸಮುದ್ರ ದಡ ತನ್ನ ಪತವನ್ನು ಬದಲಿಸಿದಾಗ ಹೊಸದಾಗಿ ಉಂಟಾಗುವ ಪ್ರದೇಶವನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 81 ಮತ್ತು 92 ರಂತೆ ನೆರೆಮಣ್ಣಿನ ಭೂಮಿ (ಅಲ್ಯೂವಿಲ್ ಲ್ಯಾಂಡ್) ಎಂದು ಪರಿಗಣಿಸುತ್ತಿದ್ದು, ಅದರಂತೆ ಜಿಲ್ಲಾಧಿಕಾರಿಗಳು ಸಲ್ಲಿಸಿದ ಪ್ರಸ್ತಾವನೆ ದಿನಾಂಕ : 16.8.2004ರಂದು ಸರ್ಕಾರಕ್ಕೆ ಬಂದಿದೆ.

ಇ) ಕೊಡವೂರು ಗ್ರಾಮದ ಮಲ್ಪೆ ಪಡುಕೆರೆ ಮತ್ತು ಕೊಳ್ಳ ಪ್ರದೇಶವನ್ನು ಕೊಡವೂರು ಗ್ರಾಮಕ್ಕೆ ಸೇರಿಸುವಾಗ ಮುಂದೆ ನೀಡಬಹುದಾದ ಕೆಲವೊಂದು ಸರ್ವೆ ನಂಬರ್‌ಗಳ ಸೇರ್ಪಡೆಯಾಗುವುದರಿಂದ ಇದಕ್ಕೆ ಹಾಲಿ ಜಾರಿಯಲ್ಲಿರುವ (ಕೇಂದ್ರ ಚುನಾವಣಾ ಆಯೋಗ) ಡಿಲಿಮಿಟೇಷನ್ ಕ್ಷೇತ್ರ ಪುನರ್ ವಿಂಗಡಣಾ ಆಯೋಗ ವಿಧಿಸಿರುವ ನಿರ್ಬಂಧವು ಅಡ್ಡಿಯಾಗುತ್ತದೆ. ಈ ನಿರ್ಬಂಧವನ್ನು ಸಡಿಲಿಸಿದ ನಂತರ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 12)ರ ಕಲಂ 5 ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.